ವಿಶೇಷ ಘಟಕ ಯೋಜನೆ ಕಾರ್ಯಕ್ರಮಗಳು

1. ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗ	
ಅ) ರಸ್ತೆ ಮತ್ತು ಸೇತುವೆಗಳು	1.05
2. ಗ್ರಾಮೀಣ ನೀರು ಸರಬರಾಜು	
ಅ) ಕೊಳವೇ ಬಾವಿ : ಕೈಪಂಪು	2.00
ಅ) ಸಾಮಾಜಿಕ ನೀರು ಸರಬರಾಜು	0.71
ಇ) ಕಿರು ನೀರು ಸರಬರಾಜು	1.92
3. ಕೃಷಿ ಇಲಾಖೆ	
ಅ) ಕೃಷಿ ಉಪಕರಣಗಳ ವಿತರಣೆ	0.47
4. ಪಶು ಸಂಗೋಪನೆ	0.26
5. ಅರಣ್ಯ ಇಲಾಖೆ	0.13
6. ತೋಟಗಾರಿಕೆ	0.71
7. ರೇಷ್ಮೆ	0.16
8. ಗ್ರಾಮೀಣ ಸಣ್ಣ ಉದ್ದಿಮೆ ತರಬೇತಿ	0.095

ಕೆ.ಯು.ಐ.ಡಿ.ಎಫ್.ಸಿ. ಸಂಸ್ಥೆಯ ಕಾರ್ಯ ಚಟುವಟಿಕೆ

2669(3036) ಶ್ರೀ ಕೃಷ್ಣಪ್ಪ ವಿ. (ದೊಡ್ಡಬಳ್ಳಾಪುರ) :— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕೆ.ಯು.ಐ.ಡಿ.ಎಫ್.ಸಿ. ಸಂಸ್ಥೆಯು ಎಂದಿನಿಂದ ಅಸ್ತಿತ್ವದಲ್ಲಿದೆ ;

ಅ) ಇದರ ಧ್ಯೇಯೋದ್ದೇಶಗಳೇನು ;

ಇ) ಇಲ್ಲಿಯವರೆಗೆ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಈ) ಈ ಸಂಸ್ಥೆಯ ಅಡಿಯಲ್ಲಿ ದೊಡ್ಡಬಳ್ಳಾಪುರ ನಗರದ ಅಭಿವೃದ್ಧಿಗಾಗಿ ಸರ್ಕಾರ ಕಾರ್ಯಕ್ರಮಗಳನ್ನು ರೂಪಿಸಿದೆಯೇ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :—

ಅ) ಕೆ.ಯು.ಐ.ಡಿ.ಎಫ್.ಸಿ.ಯ ಸ್ಥಾಪನೆಯು 2-11-1998 ರಲ್ಲಿ ಆಗಿದೆ.

ಅ) ನಗರ ಪ್ರದೇಶಗಳಲ್ಲಿ ನಗರಾಭಿವೃದ್ಧಿಗಾಗಿ ಯೋಜನೆಗಳನ್ನು ತಯಾರಿಸಿ, ನಿಯೋಜಿಸಿ ಅನುಷ್ಠಾನಗಳಿಸುವುದು.

ಸ್ಥಳೀಯ ಸಂಸ್ಥೆಗಳಿಗೆ ಅಭಿವೃದ್ಧಿ ಕಾರ್ಯಕ್ರಮ ರೂಪಿಸಲು ತಾಂತ್ರಿಕ ಸಹಾಯ ನೀಡುವುದರೊಂದಿಗೆ ಮಾಸ್ಟರ್‌ಪ್ಲಾನ್ ತಯಾರಿಕೆಯಲ್ಲಿ ಸಹಾಯ ನೀಡುವುದು.

ಸ್ಥಳೀಯ ಸಂಸ್ಥೆಗಳಿಗೆ ಸಾಲ ಮತ್ತು ಅನುದಾನದ ಸಹಾಯವನ್ನು ವಿಸ್ತರಿಸುವುದು.

ಸ್ಥಳೀಯ ಸಂಸ್ಥೆಗಳು, ನಗರಾಭಿವೃದ್ಧಿ ಸಂಸ್ಥೆಗಳ ಸಾಮರ್ಥ್ಯ ಸಂವರ್ಧನೆ ಮತ್ತು ಹಣಕಾಸು ಸಂಪನ್ಮೂಲಗಳನ್ನು ವೃದ್ಧಿಸುವಲ್ಲಿ ತಾಂತ್ರಿಕ ಸಹಾಯ ಹಾಗೂ ಕನ್ಸಲ್‌ಟೆಂಟ್‌ಗಳ ಸಹಾಯ ನೀಡುವುದು.

ಇ) ಕೆ.ಯು.ಐ.ಡಿ.ಎಫ್.ಸಿ.ಯು ಕೇಂದ್ರ ಸರ್ಕಾರ ಪುರಸ್ಕೃತ ಬೆಂಗಳೂರು ಮೆಗಾಸಿಟಿ ಯೋಜನೆ ಮತ್ತು ಎಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್ ಸಹಾಯದ ಎರಡು ಯೋಜನೆಗಳಾದ ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆ (ಕೆಯುಐಡಿಪಿ) ಮತ್ತು ಕರ್ನಾಟಕ ನಗರಾಭಿವೃದ್ಧಿ ಮತ್ತು ಕರಾವಳಿ ಪರಿಸರ ಕಾರ್ಯ ನಿರ್ವಾಹಣಾ ಯೋಜನೆ (ಕೆಯುಡಿಸಿಇಎಮ್‌ಪಿ)ಗಳ ಅನುಷ್ಠಾನ : ನೋಡಲ್ ಏಜೆನ್ಸಿಯಾಗಿರುತ್ತದೆ. ವಿಶ್ವಬ್ಯಾಂಕ್‌ನೊಂದಿಗೆ ಉತ್ತರ : ಮಧ್ಯ ಕರ್ನಾಟಕದಲ್ಲಿ ಸಾಧ್ಯತೆಯಿರುವ ಯೋಜನೆಗಾಗಿ ಮಾತುಕತೆ ನಡೆಯುತ್ತಿದೆ. ಇದಲ್ಲದೆ ಕೆ.ಯು.ಐ.ಡಿ.ಎಫ್.ಸಿ.ಯು 6 ಮಹಾನಗರ ಪಾಲಿಕೆಗಳಲ್ಲಿ ಗಣೀಕರಣಗೊಳಿಸುವ ಕಾರ್ಯಕ್ರಮದಲ್ಲಿ ತೊಡಗಿಸಿಕೊಂಡಿದೆ.

ಈ) -ಇರುವುದಿಲ್ಲ-

ದೊಡ್ಡಬಳ್ಳಾಪುರ ತಾಲ್ಲೂಕಿನ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸುವುದು.

2671 (3440) ಶ್ರೀ ಕೃಷ್ಣಪ್ಪ ವಿ. (ದೊಡ್ಡಬಳ್ಳಾಪುರ) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿರುವ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು; ಈ ವಿದ್ಯಾರ್ಥಿ ನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು;

ಆ) ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿರುವ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು; ಇಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು;